# ಸುದ್ದಿ ಸಂಚಯ

## ರಾಮಕೃಷ್ಣ ಮಿಷನ್ನಿನ ಆಡಳಿತ ಸಂಸ್ಥೆಯ ೧೯೯೯ – ೨೦೦೦ ಸಾಲಿನ ವರದಿ

**ಈ** ಸಾಲಿನಲ್ಲಿ ನಡೆದ ಮುಖ್ಯ ಅಭಿವೃದ್ಧಿ ಕಾರ್ಯಗಳಾವುವೆಂದರೆ ಇಂದೋರ್‌ನಲ್ಲಿ ಹೊಸ ಕೇಂದ್ರದ ಸ್ಥಾಪನೆ, ಅಸಾನ್ ಸೋಲ್‌ನಲ್ಲಿ ಶಿಕ್ಷಣ ಸಂಕೀರ್ಣ ಮತ್ತು ಸಾರ್‌ಗಾಚಿಯಲ್ಲಿ ಹೊಸ ಶಾಲಾಕಟ್ಟಡದ ಶಂಕುಸ್ಥಾಪನೆ, ರಾಮಹರಿಪುರದಲ್ಲಿ ಸಭಾಂಗಣದ ಉದ್ಘಾಟನೆ, ಮತ್ತು ದೇವಘರದಲ್ಲಿ ಶಾಲಾಕಟ್ಟಡದ ವಿಸ್ತೀರ್ಣ. ಇವಿಷ್ಟು ರಾಮಕೃಷ್ಣ ಮಿಷನ್ನಿನ ಕಾರ್ಯವ್ಯಾಪ್ತಿಗೆ ಸಂಬಂಧಿಸಿದ ಚಟುವಟಿಕೆಗಳು. ರಾಮಕೃಷ್ಣ ಮಠಕ್ಕೆ ಸಂಬಂಧಿಸಿದಂತೆ ನಡೆದ ಕಾರ್ಯವಿಸ್ತರಣೆಗಳಾವುವೆಂದರೆ ಚೆನ್ನೈ ಮತ್ತು ಲಕ್ನೋ ಕೇಂದ್ರಗಳಲ್ಲಿ ಹೊಸ ಶ್ರೀರಾಮಕೃಷ್ಣ ದೇವಾಲಯಗಳು ತೆರೆಯಲ್ಪಟ್ಟವು. ಹೈದರಾಬಾದಿನಲ್ಲಿ ವಿವೇಕಾನಂದ ಮಾನವ ಉತ್ಕೃಷ್ಟತಾ ಸಂಸ್ಥೆಯ ಶಂಕುಸ್ಥಾಪನೆ, ಚೆನ್ನೈನ ವಿವೇಕಾನಂದ ಇಲ್ಲಂನಲ್ಲಿ ವಿವೇಕಾನಂದ ಭಾರತೀಯ ಸಾಂಸ್ಕೃತಿಕ ಪರಂಪರಾ ಪ್ರದರ್ಶನದ ಮೊದಲ ಹಂತದ ಉದ್ಘಾಟನೆ ಮತ್ತು ವೈಟ್ಟಿಲಾ (ಎರ್ನಾಕುಲಂ)ದಲ್ಲಿ ಹೊಸ ಕೇಂದ್ರದ ಸ್ಥಾಪನೆ.

ಈ ವರ್ಷದ ಅವಧಿಯಲ್ಲಿ ರಾಮಕೃಷ್ಣ ಮಿಷನ್ ಭಾರತದ ಹಲವು ಕಡೆಗಳಲ್ಲಿ ಪರಿಹಾರ ಮತ್ತು ಪುನರ್ವಸತಿ ಕಾರ್ಯಗಳನ್ನು ಬೃಹತ್ ಪ್ರಮಾಣದಲ್ಲಿ ನಡೆಸಿದೆ. ಅವುಗಳಿಗೆ ತಗಲಿದ ವೆಚ್ಚ ರೂ. ೫.೨೮ ಕೋಟಿ. ಇದರ ಪ್ರಯೋಜನವನ್ನು ೮೦೦ ಹಳ್ಳಿಗಳಲ್ಲಿರುವ ೪ ಲಕ್ಷ ಜನರು ಪಡೆದಿರುವರು. ಒರಿಸ್ಸಾದ ಚಂಡಮಾರುತಕ್ಕೆ ಒಳಗಾದ ಎರಡು ಪ್ರದೇಶಗಳಲ್ಲಿ ಬೃಹತ್ ಪುನರ್ವಸತಿ ಕಾರ್ಯಕ್ರಮವನ್ನು ಕೈಗೊಳ್ಳಲಾಯಿತು. ೨.೧೯ ಕೋಟಿ ರೂಪಾಯಿಗಳನ್ನು ಬಡ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ, ವೃದ್ಧ, ಅಸ್ವಸ್ಥ ಮತ್ತು ಅನಾಥ ವ್ಯಕ್ತಿಗಳಿಗೆ ಧನಸಹಾಯ ನೀಡಲು ವಿನಿಯೋಗಿಸಲಾಗಿದೆ. ೯ ಆಸ್ಪತ್ರೆಗಳು, ೧೦೮ ಡಿಸ್ಪೆನ್ಸರಿಗಳು ಮತ್ತು ಮೊಬೈಲ್ ಡಿಸ್ಪೆನ್ಸರಿಗಳ ಮೂಲಕ ೫೧ ಲಕ್ಷ ಜನರಿಗೆ ವೈದ್ಯಕೀಯ ನೆರವನ್ನು ನೀಡಲಾಗಿದೆ. ಇದಕ್ಕೆ ತಗಲಿದ ಒಟ್ಟು ವೆಚ್ಚ ರೂ.೨೫.೩೩ ಕೋಟಿ.

ಶಿಶುವಿಹಾರಗಳಿಂದ ಹಿಡಿದು ಸ್ನಾತಕೋತ್ತರದವರೆಗಿನ ಶಿಕ್ಷಣ ಸಂಸ್ಥೆಗಳ ಮೂಲಕ ೧.೦೭ ಲಕ್ಷ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸ ನೀಡಲಾಗಿದೆ. ಇವರಲ್ಲಿ ೩೧,೦೦೦ ವಿದ್ಯಾರ್ಥಿನಿಯರು. ೬೮.೬೦ ಕೋಟಿ ರೂಪಾಯಿಗಳನ್ನು ಈ ಶಿಕ್ಷಣ ಕಾರ್ಯಕ್ಕಾಗಿ ವಿನಿಯೋಗಿಸಲಾಗಿದೆ.ರೂ.೮.೮೮ ಕೋಟಿ ವೆಚ್ಚದ ಗ್ರಾಮ ಮತ್ತು ಗಿರಿಜನ ಉದ್ಧಾರ ಯೋಜನೆಯನ್ನು ಈ ಸಾಲಿನಲ್ಲಿ ಕೈಗೊಳ್ಳಲಾಯಿತು.

ಈ ಸಂದರ್ಭದಲ್ಲಿ ನಮ್ಮೊಡನೆ ಸಹಕರಿಸಿದ ನಮ್ಮ ಸದಸ್ಯರು ಮತ್ತು ಸ್ನೇಹಿತರೆಲ್ಲರಿಗೂ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತೇವೆ.

**ಸ್ವಾಮಿ ಸ್ಮರಣಾನಂದ**
(ಪ್ರಧಾನ ಕಾರ್ಯದರ್ಶಿ)

**ರಾಮಕೃಷ್ಣ ಮಹಾಸಂಘದ ಉಪಾಧ್ಯಕ್ಷರಾದ ಶ್ರೀಮತ್ ಸ್ವಾಮಿ ಆತ್ಮಸ್ಥಾನಂದಜಿ ಮಹಾರಾಜ್ ಅವರ ಮೈಸೂರು ಭೇಟಿ**

ಪೂಜ್ಯ ಸ್ವಾಮೀಜಿಯವರು ೧೧.೨.೨೦೦೧ನೇ ಭಾನುವಾರ ಮೈಸೂರಿಗೆ ಆಗಮಿಸಿ, ೧೬.೨.೨೦೦೧ ಶುಕ್ರವಾರದವರಗೆ ಇರುತ್ತಾರೆ. ಈ ಸಂದರ್ಭದಲ್ಲಿ ಅವರು ೧೬.೨. ೨೦೦೧ ರಂದು ನವೀಕರಿಸಲ್ಪಟ್ಟ ಮತ್ತು ಕಂಪ್ಯೂಟರೀಕೃತ ಆಶ್ರಮದ ಗ್ರಂಥಾಲಯವನ್ನು ಉದ್ಘಾಟಿಸುತ್ತಾರೆ ಮತ್ತು ಮೈಸೂರು ಆಶ್ರಮದ ಅಮೃತ ಮಹೋತ್ಸವದ ಆಚರಣೆಯ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಅವರ ದರ್ಶನದ ವೇಳೆ ಪ್ರತಿದಿನ ಸಂಜೆ ೫.೩೦ರಿಂದ ೬.೩೦ರವರಗೆ.

*ವಿವರಗಳಿಗಾಗಿ ಆಶ್ರಮವನ್ನು ಸಂಪರ್ಕಿಸಿ.*

## ತುಮಕೂರಿನಲ್ಲಿ ಭಕ್ತಸಮ್ಮೇಳನ

**ತು**ಮಕೂರಿನಲ್ಲಿರುವ ರಾಮಕೃಷ್ಣ-ವಿವೇಕಾನಂದ ಆಶ್ರಮದ ವತಿಯಿಂದ ೨೦೦೦, ಡಿಸೆಂಬರ್ ೨೮ರಿಂದ ೩೧ರ ವರೆಗೆ ಒಂದು ಬೃಹತ್ ಭಕ್ತಸಮ್ಮೇಳನವು ನಡೆಯಿತು. ಸಾಧುಗಳು, ಸ್ವಯಂ ಸೇವಕರು ಎಲ್ಲ ಸೇರಿ ಸುಮಾರು ೨೦೦೦ ಪ್ರತಿನಿಧಿಗಳು ಭಾಗವಹಿಸಿದ್ದರು.

ದಿನಾಂಕ ೨೮ರಂದು ಬೆಳಗ್ಗೆ ಆಶ್ರಮದ ನೂತನ ಕಟ್ಟಡ, ಗ್ರಂಥಾಲಯ ಮತ್ತು ಜೀವಂತ ದುರ್ಗಾಪೂಜೆ ಇವುಗಳ ಉದ್ಘಾಟನೆಯೊಂದಿಗೆ ಸಮ್ಮೇಳನ ಪ್ರಾರಂಭವಾಯಿತು. ಸಮ್ಮೇಳನದ ಉದ್ಘಾಟನೆ ಮತ್ತು ಸಮಾರೋಪ ಸಮಾರಂಭಗಳೂ ಸೇರಿದಂತೆ ಒಟ್ಟು ಒಂಬತ್ತು ಅಧಿವೇಶನಗಳು ಜರುಗಿದವು.

ಈ ಅಧಿವೇಶನಗಳಲ್ಲಿ ಶ್ರೀರಾಮಕೃಷ್ಣ, ಶ್ರೀಶಾರದಾದೇವಿ ಮತ್ತು ಸ್ವಾಮಿ ವಿವೇಕಾನಂದರ ಜೀವನ ಸಂದೇಶಗಳು, ಕನ್ನಡ ನಾಡಿನಲ್ಲಿ ಈ ದಿವ್ಯತ್ರಯರ ಪ್ರಭಾವ, ಅವರನ್ನು ಕುರಿತ ಕನ್ನಡ ಸಾಹಿತ್ಯದ ವ್ಯಾಪ್ತಿ—ಮುಂತಾದ ವಿಷಯಗಳ ಮೇಲೆ ವಿದ್ವತ್ಪೂರ್ಣವಾದ, ಸ್ಫೂರ್ತಿದಾಯಕವಾದ ಉಪನ್ಯಾಸಗಳು ನಡೆದವು.

ನಾಡಿನ ಪ್ರಸಿದ್ಧ ಸಾಹಿತಿಗಳು, ರಾಮಕೃಷ್ಣ ಮಠ ಮತ್ತು ಮಿಷನ್ನಿನ ಸ್ವಾಮಿಗಳು ಮತ್ತು ಬೇರೆ ಸಂಪ್ರದಾಯದ ಸ್ವಾಮಿಗಳು ಈ ಸಮ್ಮೇಳನದಲ್ಲಿ ಭಾಗವಹಿಸಿ ತಮ್ಮ ವಿಚಾರಪೂರ್ಣ ನುಡಿಗಳ ಮೂಲಕ ಭಕ್ತರ ಮನಸೆಳೆದರು. ಪ್ರತಿದಿನ ಭಜನೆ, ಹರಿಕಥೆ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳಿದ್ದವು.

ಹೊರಗಿನಿಂದ ಬಂದ ಪ್ರತಿನಿಧಿಗಳಿಗೆ ಹತ್ತಿರದ ಕಲ್ಯಾಣ ಮಂಟಪಗಳಲ್ಲಿ ವಸತಿ ವ್ಯವಸ್ಥೆ ಮಾಡಲಾಗಿತ್ತು. ಊಟ, ತಿಂಡಿಯ ವ್ಯವಸ್ಥೆ ಆಶ್ರಮದ ಆವರಣದಲ್ಲಿಯೇ ನಡೆಯಿತು.

ವೈದ್ಯಕೀಯ, ದೂರವಾಣಿ ಮುಂತಾದ ಸೌಲಭ್ಯಗಳನ್ನು ಒದಗಿಸಲಾಗಿತ್ತು. ಪ್ರತ್ಯೇಕ ಪುಸ್ತಕಮಾರಾಟದ ಮಳಿಗೆ ಏರ್ಪಡಿಸಲಾಗಿತ್ತು. ಸುಮಾರು ಒಂದು ಲಕ್ಷ ರೂಪಾಯಿಗಳ ಮೌಲ್ಯದ ರಾಮಕೃಷ್ಣ ಆಶ್ರಮದ ಗ್ರಂಥಗಳು ಮಾರಾಟವಾದವು. ವಿವಿಧ ಪತ್ರಿಕೆಗಳಲ್ಲಿ ಈ ಸಮಾರಂಭದ ವಿಸ್ತೃತ ವರದಿ ಪ್ರಕಟವಾಯಿತು. ಒಟ್ಟು ಕಾರ್ಯಕ್ರಮ ಎಷ್ಟು ಯಶಸ್ವಿಯಾಗಿಯೂ ಪರಿಣಾಮಕಾರಿಯಾಗಿಯೂ ನಡೆಯಿತು ಎಂಬುದನ್ನು ಪ್ರತಿನಿಧಿಗಳ ಸಂತೋಷಪೂರ್ಣ ಪ್ರತಿಕ್ರಿಯೆಗಳ ಮೂಲಕ ಊಹಿಸಬಹುದಾಗಿತ್ತು. ಇಂತಹ ಸಮ್ಮೇಳನಗಳು ದಿವ್ಯತ್ರಯರ ಭಾವಪ್ರಚಾರದ ಮೂಲಕ ಸಮಾಜದಲ್ಲಿ ಹೊಸ ಆಧ್ಯಾತ್ಮಿಕ ಜಾಗೃತಿಯನ್ನು ಉಂಟು ಮಾಡುವುದರಲ್ಲಿ ಯಶಸ್ವಿಯಾಗುತ್ತವೆ ಎನ್ನುವುದರಲ್ಲಿ ಸಂದೇಹವಿಲ್ಲ.

*(ಈ ಸಮ್ಮೇಳನದ ವಿಸ್ತೃತ ವರದಿಯನ್ನು ಮುಂದಿನ ಸಂಚಿಕೆಯಲ್ಲಿ ನೀಡಲಾಗುವುದು.)* ❑

## ತಮಿಳುನಾಡಿನಲ್ಲಿ ರಾಮಕೃಷ್ಣ ವಿವೇಕಾನಂದ ಭಕ್ತ ಸಮ್ಮೇಳನ

**ರಾ**ಮಕೃಷ್ಣ-ವಿವೇಕಾನಂದರ ಭಕ್ತ ಪರಿವಾರದ ರಾಜ್ಯ ಮಟ್ಟದ ೬ನೆ ಸಮ್ಮೇಳನವು ೨೦೦೦ ಡಿಸೆಂಬರ್ ೨೩ರಿಂದ ೨೫ರವರಗೆ ದಕ್ಷಿಣ ತಮಿಳುನಾಡಿನ ವಿರುದನಗರ ಜಿಲ್ಲೆಯ ರಾಜ್ಯಪಾಳ್ಯದಲ್ಲಿ ವಿಜೃಭಂಣೆಯಿಂದ ನೆರವೇರಿತು. ರಾಮಕೃಷ್ಣ ಮಠ ಮತ್ತು ಮಿಷನ್ನಿನ ಪ್ರಧಾನ ಕಾರ್ಯದರ್ಶಿಗಳಾದ ಶ್ರೀಮತ್ ಸ್ವಾಮಿ ಸ್ಮರಣಾನಂದಜೀಯವರ ಅಧ್ಯಕ್ಷತೆ, ಚೆನ್ನೈ ರಾಮಕೃಷ್ಣ ಮಠದ ಅಧ್ಯಕ್ಷರಾದ ಸ್ವಾಮಿ ಗೌತಮಾನಂದಜೀ ಮಹಾರಾಜ್‌ರವರ ವಿಚಾರಪೂರ್ಣವಾದ ಪ್ರವಚನಗಳು, ರಾಮಕೃಷ್ಣ ಮಠದ ಹಿರಿಯ ಸ್ವಾಮಿಗಳ ಆಶೀರ್ವಚನ—ಇವೆಲ್ಲವೂ ಈ ಸಮ್ಮೇಳನಕ್ಕೆ ವಿಶೇಷ ಕಳೆಯನ್ನು ಕೊಟ್ಟಿತ್ತು.

ಸಮ್ಮೇಳನದ ಎರಡನೇ ದಿನ ಭಗವಾನ್ ಶ್ರೀರಾಮಕೃಷ್ಣರ ಭಾವಚಿತ್ರವನ್ನು ಹೊತ್ತಿದ್ದ ಅಂಬಾರಿಯು, ಶಾಲಾ ವಿದ್ಯಾರ್ಥಿಗಳ ಬ್ಯಾಂಡ್ ವಾದ್ಯದೊಡನೆ ಅಪಾರ ಸಂಖ್ಯೆಯ ರಾಮಕೃಷ್ಣ ಭಕ್ತವೃಂದ ಹಾಗೂ ಭಜನೆತಂಡಗಳ ಮೆರವಣಿಗೆಯಲ್ಲಿ ಸಾಗಿತು. ಮೆರವಣಿಗೆಯ ನಂತರ ತಮಿಳುನಾಡಿನ ಖ್ಯಾತ ಕೈಗಾರಿಕೋದ್ಯಮಿ, ಹಾಗೂ ಸಮ್ಮೇಳನದ ಪ್ರಧಾನ ಆಯೋಜಕ ಶ್ರೀಯುತ ಪಿ ಆರ್ ರಾಮಸುಬ್ರಹ್ಮಣ್ಯ ರಾಜ ಇವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ನಡೆಯಿತು.

ರಾಮಕೃಷ್ಣ ಮಿಷನ್ ಸ್ವಾಮಿಗಳಿಂದ ಹಾಗೂ ತಮಿಳುನಾಡಿನ ರಾಮಕೃಷ್ಣ ವಿವೇಕಾನಂದ ಸಮಿತಿಗಳಿಂದ ಭಾವಪೂರ್ಣವಾದ ಭಜನೆ ಗೀತೆಗಳು, ಸ್ಥಳೀಯ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು, ಕೊಯಂಬತ್ತೂರಿನ ರಾಮಕೃಷ್ಣ ವಿದ್ಯಾಲಯದ ಖ್ಯಾತ ಹರಿಕಥಾ ದಾಸರಾದ ಶ್ರೀ ಆರ್.ಕೃಷ್ಣಮೂರ್ತಿಯವರಿಂದ ಹರಿಕಥೆ ಇವೆಲ್ಲವೂ ಒಂದು ಅಪೂರ್ವವಾದ ಭಕ್ತಿಪೂರ್ಣ ವಾತಾವರಣವನ್ನು ಸೃಷ್ಟಿಸಿದ್ದವು. ಒಂದು ಸಾವಿರಕ್ಕೂ ಹೆಚ್ಚಿನ ಭಕ್ತಾದಿಗಳು ಹಾಗೂ ರಾಮಕೃಷ್ಣ ಮಿಷನ್ನಿನ ೨೦ ಸಂನ್ಯಾಸಿಗಳು ಈ ಮೂರೂ ದಿನಗಳು ಸಮ್ಮೇಳನದಲ್ಲಿ ಉಪಸ್ಥಿತರಿದ್ದು ಇವರೆಲ್ಲರ ಊಟೋಪಚಾರ ಮೊದಲಾದ ಸಮ್ಮೇಳನದ ಪ್ರತಿಯೊಂದು ಅಂಶವೂ ವ್ಯವಸ್ಥಿತವಾಗಿ ಆಯೋಜಿಸಲ್ಪಟ್ಟಿತ್ತು.

ಅದ್ದೂರಿಯಿಂದ ನಡೆದ ಈ ಸಮ್ಮೇಳನ ನಿಜಕ್ಕೂ, ರಾಮಕೃಷ್ಣ ವಿವೇಕಾನಂದ ಭಕ್ತಪರಿವಾರ ಒಂದೆಡೆ ಕಲೆತು ಸಹಸ್ರಮಾನದ ಹೊಸ ವರ್ಷದಲ್ಲಿ ತಮ್ಮ ಬದುಕನ್ನು ಅಧ್ಯಾತ್ಮಿಕತೆಯ ಬೆಳಕಿನಲ್ಲಿ ಸಾರ್ಥಕಗೊಳಿಸಿಕೊಳ್ಳುವ ಹೊಸ ಸಂಕಲ್ಪಗಳಿಗೆ ಬಲವಾದ ಪ್ರೇರಕ ಶಕ್ತಿಯಾಗಿತ್ತು. ❑

## ವಿಶಾಖಪಟ್ಟಣದಲ್ಲಿ ಆಂಧ್ರಪ್ರದೇಶ ರಾಮಕೃಷ್ಣ ವಿವೇಕಾನಂದ ಭಾವಪ್ರಚಾರ ಪರಿಷತ್ತಿನ ವಾರ್ಷಿಕ ಭಕ್ತ ಸಮ್ಮೇಳನ

**ರಾ**ಮಕೃಷ್ಣ ಮಠ ಮತ್ತು ಮಿಷನ್ನಿನಿಂದ ನಿರೂಪಿತವಾಗಿರುವ ಮಾರ್ಗದರ್ಶಕ ಸೂತ್ರಗಳ ನೆಲೆಯಲ್ಲಿ ರಚಿತವಾದ ರಾಮಕೃಷ್ಣ-ವಿವೇಕಾನಂದ ಭಾವಪ್ರಚಾರಪರಿಷತ್ತಿನ ವ್ಯಾಪ್ತಿಯಲ್ಲಿ ಬರುವ ಒಟ್ಟು ೮೪ ರಾಮಕೃಷ್ಣ-ವಿವೇಕಾನಂದ ಸೇವಾ ಸಮಿತಿಗಳು, ಆಂಧ್ರಪ್ರದೇಶದ ನಗರ ಮತ್ತು ಗ್ರಾಮಾಂತರ ಪ್ರದೇಶಗಳಲ್ಲೆಲ್ಲಾ ವ್ಯಾಪಕವಾದ ಸೇವೆಯಲ್ಲಿ ತೊಡಗಿವೆ. ಪ್ರತಿವರ್ಷ ಈ ಸಮಿತಿಗಳೆಲ್ಲ ವಿವಿಧ ಕೇಂದ್ರಗಳಲ್ಲಿ ಒಂದು ವಾರ್ಷಿಕ ಹಾಗೂ ಒಂದು ಅರ್ಧವಾರ್ಷಿಕ ಭಕ್ತ ಸಮ್ಮೇಳನಗಳನ್ನು ಹಮ್ಮಿಕೊಂಡಿರುತ್ತವೆ.

ಭಾವಪ್ರಚಾರ ಪರಿಷತ್ತಿನ ೧೦ನೆ ವಾರ್ಷಿಕ ಭಕ್ತ ಸಮ್ಮೇಳನ ೨೦೦೦ ಡಿಸೆಂಬರ್ ೨೩ರಿಂದ ೨೫ರವರೆಗೆ ಈ ಬಾರಿ ವಿಶಾಖಪಟ್ಟಣದಲ್ಲಿ ನೆರವೇರಿತು. ಈ ಸಮ್ಮೇಳನದಲ್ಲಿ ೧೬೦೦ಕ್ಕೂ ಮೇಲ್ಪಟ್ಟು ಭಕ್ತಪ್ರತಿನಿಧಿಗಳು, ವಿಶೇಷ ಆಹ್ವಾನಿತರು, ಸ್ವಯಂ ಸೇವಕರು ಹಾಗೂ ರಾಮಕೃಷ್ಣ ಮಿಷನ್ನಿನ ಸಾಧುವೃಂದದವರು ಪಾಲ್ಗೊಂಡಿದ್ದರು. ಪ್ರವಚನಗಳು, ಹರಿಕಥೆ,ಶಿವತಾಂಡವ ನೃತ್ಯ ಮೊದಲಾದ ಸಾಂಸ್ಕೃತಿಕ ಕಾರ್ಯಕ್ರಮಗಳೇ ಇದ್ದುವಲ್ಲದೆ ಈ ಸಮ್ಮೇಳನದಲ್ಲಿ ಒಂದು ಸ್ಮರಣ ಸಂಚಿಕೆಯನ್ನೂ ಬಿಡುಗಡೆ ಮಾಡಲಾಯಿತು. ❑

### ಆಶ್ರಮದ ವಿಶೇಷ ಕಾರ್ಯಕ್ರಮಗಳು

**ಫೆಬ್ರವರಿ 2001**

| | | |
|---|---|---|
| **08** | ಗುರುವಾರ | ಸ್ವಾಮಿ ಅದ್ಭುತಾನಂದ ಜಯಂತಿ |
| **21** | ಬುಧವಾರ | ಮಹಾಶಿವರಾತ್ರಿ |
| **25** | ಭಾನುವಾರ | ಶ್ರೀರಾಮಕೃಷ್ಣ ಜಯಂತಿ |

**ಫೆಬ್ರವರಿ 26ರಿಂದ ಮಾರ್ಚ್ 4ನೆಯ ತಾರೀಖಿನವರೆಗೆ ವಿವಿಧ ಕಾರ್ಯಕ್ರಮಗಳನ್ನು ಒಳಗೊಂಡ ಆಶ್ರಮದ ವಾರ್ಷಿಕೋತ್ಸವ**

ಪ್ರತಿ ಶನಿವಾರ ಇಂಗ್ಲೀಷಿನಲ್ಲಿ ಮತ್ತು ಭಾನುವಾರ ಕನ್ನಡದಲ್ಲಿ ಸಂಜೆ 6.00 ರಿಂದ 7.00 ರವರೆಗೆ ಆಧ್ಯಾತ್ಮಿಕ ಪ್ರವಚನಗಳು ನಡೆಯುತ್ತವೆ.

ವಿವರಗಳಿಗಾಗಿ ಆಶ್ರಮವನ್ನು ಸಂಪರ್ಕಿಸಿ